ಚಿತ್ತ ಕೆತ್ತಿದ ಚಿತ್ರ

# ಹನೇಹಳ್ಳಿಯ ಬುಡಣಸಾಬರು



**ಸುನಂದಾ ಕಡಮೆ**

ಕಲೆ: ಪ್ರವೀಣ್ ಆಚಾರ್ಯ

ಬುಡಣಸಾಬರು ಕರಾವಳಿ ತೀರದ ಹನೇಹಳ್ಳಿ ಭಾಗದಲ್ಲೇ ತೀರಾ ಹಳಬರು. ಅಂಗೈ ಮುಚ್ಚುವ ನೀಳ ತೋಳಿನ, ಅವರ ಪಾದಗಳಿಗೂ ನಿಲುಕುವ ಕಪ್ಪು ನಿಲುವಂಗಿ, ಹೊಟ್ಟೆಯವರೆಗೂ ಹವ್ವನೆ ಹರಡಿ ಬಿದ್ದ ನೆರೆತ ತಲೆ ಮೀಸೆ, ಗಡ್ಡದ ಬೆಳ್ಳಗಿನ ಕೂದಲು, ಊರವರ ಪ್ರಶ್ನೆಗಳಿಗೆ ಬರಿದೇ ನಕ್ಕು ಮುಂದೆ ಸಾಗುವಾಗ ತಟ್ಟನೆ ಮಿಂಚುವ ಇನ್ನೂ ಗಟ್ಟಿಯಾಗಿಯೇ ಉಳಿದ ಅವರ ಹಲ್ಲಿನ ಸಾಲು. ಆರು ಅಡಿ ಕಾಯದ ಪುರಾಣ ಕಾಲದ ಮಹರ್ಷಿಯಂತಹ ವ್ಯಕ್ತಿತ್ವ ಅವರದು. ಊರಿನ ಬೀದಿಯಲ್ಲಿ ಹೊತ್ತಿಗೆ ಮುಂಚೆ ಕವಿದ ಮಳೆ ಮೋಡದ ನಸುಗತ್ತಲಲ್ಲಿ ಅನುದಿನದಂತೆ ಹೊರಟ ಇವರ ಕೈಯಲ್ಲಿ ಇವರಿಗಿಂತಲೂ ಒಂದು ಮುಷ್ಟಿ ಉದ್ದವಾದ ಬಿದಿರಿನ ಬೆತ್ತ. ಈಗ ಥೇಟು ಪವಾಡ ಪುರುಷನೇ. ಮೊಮ್ಮಕ್ಕಳ ಮನೆಗೆಂದು ಅನುದಿನವೂ ಮೂಡಣದಿಂದ ಪಡುವಣಕ್ಕೆ, ಪಡುವಣದಿಂದ ಮೂಡಣಕ್ಕೆ ನಡೆವ ಇವರ ವೃದ್ಧಸಂಚಾರ ಮಾತ್ರ ಊರೆಲ್ಲ ಪ್ರಸಿದ್ಧಿ ಪಡೆದಿತ್ತು. ಇವರ ಇರುವೇ ಎಲ್ಲರ ದೈನಿಕದ ಒಂದು ಭಾಗವಾಗಿ ಹಂಚಿಹೋಗಿತ್ತು.

> ಮತ್ತೆ ಮತ್ತೆ ಕಾಡುವ ಯಶವಂತ ಚಿತ್ತಾಲರ 'ಆಟ' ಕಥೆಯ ಬುಡಣ ಸಾಬರು

'ಬುಡಣ ಸಾಬರು ಬಹಳ ಮುದುಕರು, ಮಳೆಯು ಬಂದರೂ ಹೊರಗೆ ಹೊರಟರು' ಎಂದು ಕಕ್ಕುಲಾತಿಯಿಂದ ಹಾಡುವ ಊರಿನ ಯುವಕರನ್ನು ನಸುನಗುತ್ತಲೇ 'ಓಯ್, ಇನ್ನೂ ಹುಡುಗುತನ ಬಿಟ್ಟಿಲ್ಲ' ಎಂದು ಮನೆ ಮಕ್ಕಳಂತೆಯೇ ಅವರು ಗದರುತ್ತಾರೆ. ಹಳೆ ಮನೆಯ ಮುದುಕ ಸದಾಶಿವರಾಯರು ಎಂದಿನಂತೆ ದಣಪೆಯ ಮೇಲೆ ಕೂತಿರದೇ ಇದ್ದುದನ್ನು ಕಂಡು 'ಮಳೆಗೆ ಹೆದರಿರಬೇಕು ಮುದ್ಕ' ಅಂದುಕೊಳ್ಳುವ ಬುಡಣಸಾಬರು ಎಂಥ ಮಳೆಗೂ ಭಯಬೀಳುವವರಲ್ಲ, ಎಂಟ್ಹತ್ತು ಮಳೆ ಹನಿಗಳು ಮೈಮೇಲೆ ಉದುರಿದರೂ ಹೆಜ್ಜೆಯ ವೇಗವನ್ನು ಹೆಚ್ಚಿಸದೇ ಬೀದಿಯಲ್ಲಿ ಸಿಗುವ ಮನೆ ಅಂಗಡಿಗಳ ಜನ ಮಾಡುತ್ತಿದ್ದ ಎಂಥದೋ ಕೆಲಸವನ್ನು ವೀಕ್ಷಿಸುತ್ತ ಕೆಲಕ್ಷಣ ನಿಂತೇ ಪುನಃ ಸಾಗುವರು. ಊರಿನ ಒಂದು ಸೀಮಿತ ಪರಿಸರದಲ್ಲಿ ಮನುಷ್ಯ ಸಂಬಂಧದ ಎಳೆಯನ್ನು ಕಟ್ಟುವ ಅವರ ಅಸ್ತಿತ್ವವು ಹೀಗೆ ಬೆರಗುಗೊಳಿಸುವಂಥದ್ದು. ಬುಡಣಸಾಬರು ನಡೆವ ಹಾದಿಗುಂಟ ಒಂದು ರೀತಿಯ ಅಂತಃಕರಣ ಉಕ್ಕುತ್ತದೆ.

'ತ್ವರೆ ಮಾಡಿ, ಮಳೆ ಬರ್ತದೆ, ಕೊಡೆಯಿಲ್ಲದೇ ಹೊರಟು ಬಿಟ್ಟಿರಲ್ಲ?' 'ನಮ್ಮ ಅಂಗಡಿಕಟ್ಟೆಯ ಮೇಲಾದ್ರೂ ನಿಂತು ಸಾಗಿ', 'ನರಸಿಂಹ ಆಟಕ್ಕೆ ಕರೆದಿದ್ದಾನೆ ಆಟಕ್ಕೆ, ನಮ್ಮ ದೊಡ್ಡಪ್ಪನಿಗೆ ಮಾತ್ರ ಹೇಳಬೇಡಿ ದಮ್ಮಯ್ಯ' ಅಂತ ಅವರೆಲ್ಲ ಮನೆಯಜ್ಜನ ಬಳಿ ಗೋಗರೆದಂತೆ ಹೇಳುತ್ತಾ ಓಡುತ್ತಿರುತ್ತಾರೆ, ಇಂತಹದೊಂದು ಬಗೆಯ ಕೌಟುಂಬಿಕತೆಯಲ್ಲಿ ಹನೇಹಳ್ಳಿ ಮೀಯುತ್ತಿರುತ್ತದೆ. ಕಾಳಜಿ ತೋರುತ್ತಲೇ ಗುಟ್ಟುಬಿಟ್ಟುಕೊಟ್ಟ ಊರಿನ ಮಕ್ಕಳು ಇಷ್ಟೊಂದು ಉತ್ಸಾಹದಿಂದ ಇಸ್ಪೀಟಿನ ಆಟಕ್ಕೆ ದೌಡಾಯಿಸುತ್ತಿರುವುದನ್ನು ಕಂಡು ಎಲ್ಲೋ ಬುಡಣಸಾಬರ ಜೀವ ಮರುಗುತ್ತದೆ. 'ಎಲ್ಲ ಬಿಟ್ಟು ಇಸ್ಪೀಟಿನ ತಲಬಿಗೆ ಅಂಗಡಿಯನ್ನು ಹೀಗೆ ಬೇಗ ಮುಚ್ಚಿದರೋ?' ಎಂದು ಕಳವಳಿಸುವ ಸಾಬರದು